**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ನಾಗಮಂಗಲ.**

ಸಿ.ಸಿ- 806/2022

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ದೌಲತ್ ಉನ್ನಿಸಾ | ಡಿ.ಡಬ್ಲ್ಯೂ | : | 1 |
| ತಂದೆ / ಗಂಡನ ಹೆಸರು | : | ಎಸ್. ಮಹಮ್ಮದ್ ಅಲಿ | ದಿನಾಂಕ | : | 27-03-2026 |
| ವಯಸ್ಸು | : | 38 ವರ್ಷ | | | |
| ಉದ್ಯೋಗ | : | ವ್ಯಾಪಾರಿ | | | |
| ವಾಸಸ್ಥಳ | : | ಮೈಸೂರು | | | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. ವಿ. ಜಿ. ಎಸ್. ವಕೀಲರಿಂದಃ

1. ನಾನು 2020 ನೇ ಇಸವಿಯಲ್ಲಿ ಮೈಸೂರಿನಲ್ಲಿ ರಮಜಾನ್ ಬೆನೆಫಿಟ್ ಸ್ಕೀಮ್ ನ್ನು ನಡೆಸುತ್ತಿದ್ದೆನು. ಸದರಿ ಸ್ಕೀಮಿನಲ್ಲಿ ಒಂದು ಕಾರ್ಡಿಗೆ 1,000/- ರೂಪಾಯಿಗಳನ್ನು ನಿಗದಿ ಪಡಿಸಲಾಗಿತ್ತು. ಸದರಿ ಸ್ಕೀಮಿನಲ್ಲಿ ಒಬ್ಬ ಸದಸ್ಯ ಬೇರೆ ಬೇರೆ ವ್ಯಕ್ತಿಗಳ ಹೆಸರಿನಲ್ಲಿ ಎಷ್ಟು ಬೇಕಾದರೂ ಕಾರ್ಡ್ ಗಳನ್ನು ಖರೀದಿ ಮಾಡಲು ಅವಕಾಶ ಇತ್ತು. ಸದರಿ ಸ್ಕೀಮಿನಲ್ಲಿ ಖುರಂ ಪಾಷ ರವರು ಸದಸ್ಯರಾಗಿದ್ದು ಅವರು 140 ಕಾರ್ಡ್ ಗಳನ್ನು ಖರೀದಿ ಮಾಡಿದ್ದು ಅದರ ಬಾಬ್ತು 1,40,000/- ರೂಪಾಯಿಗಳನ್ನು ನನಗೆ ಪಾವತಿ ಮಾಡಿದ್ದರು. ನಾನು ಸದರಿ ಖುರಂ ಪಾಷ ರವರಿಗೆ ಕಾರ್ಡ್ ಗಳನ್ನು ನೀಡುವ ಸಮಯದಲ್ಲಿ ಅವರಿಗೆ 10 ಕಾರ್ಡ್ ಗಳನ್ನು ಹೆಚ್ಚುವರಿಯಾಗಿ ನೀಡಿದ್ದೆನು. ಸದರಿ ಹಣದ ಭದ್ರತೆಗಾಗಿ ಸದರಿ ಖುರಂ ಪಾಷ ರವರು ನನ್ನಿಂದ ಎರಡೂ ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದರು. ನಂತರ ದಿನಾಂಕಃ 09-08-2021 ರಂದು 150 ಕಾರ್ಡಿಗೆ ಸಂಬಂಧಿಸಿದ ಬೆನೆಫಿಟ್ ಆದ 1,50,000/- ರೂಪಾಯಿಗಳ ರೇಷನ್ ನ್ನು ನಾನು ಸದರಿ ಖುರಂ ಪಾಷ ರವರಿಗೆ ನೀಡಿ ಸದರಿ ಸದಸ್ಯತ್ವವನ್ನು ಮುಕ್ತಾಯಗೊಳಿಸಿದ್ದೆನು. ಆ ಸಮಯದಲ್ಲಿ ನಾನು ಚೆಕ್ಕುಗಳನ್ನು ವಾಪಸ್ಸು ನೀಡುವಂತೆ ಸದರಿ ಖುರಂ ಪಾಷ ರವರನ್ನು ಕೇಳಿದಾಗ ಸದರಿ ಖುರಂ ಪಾಷ ರವರು ತಾನು ನಾಗಮಂಗಲದಲ್ಲಿ ವಾಸ ಮಾಡಿಕೊಂಡಿದ್ದು ಚೆಕ್ಕುಗಳು ನಾಗಮಂಗಲದಲ್ಲಿ ಇರುತ್ತವೆ ಅವುಗಳನ್ನು ತಂದು ಕೊಡುತ್ತೇನೆ ಎಂದು ಹೇಳಿದ್ದರು. ನಂತರ ಸದರಿ ಖುರಂ ಪಾಷ ರವರು ನನಗೆ ಸೇರಿದ ಎರಡು ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಚೆಕ್ಕಿಗೆ ಸಂಬಂಧಿಸಿದಂತೆ ಅವರು ನನ್ನ ವಿರುದ್ಧ ಒಂದು ಪ್ರಕರಣವನ್ನು ದಾಖಲು ಮಾಡಿದ್ದು ಫಿರ್ಯಾದುದಾರರ ಮೂಲಕ ಈ ಫಿರ್ಯಾದನ್ನು ಸಹ ದಾಖಲು ಮಾಡಿಸಿರುತ್ತಾರೆ.

2. ನನಗೆ ಫಿರ್ಯಾದುದಾರರಿಂದ ಹಣ ಪಡೆಯುವ ಯಾವುದೇ ಅವಶ್ಯಕತೆ ಇರಲಿಲ್ಲ. ಫಿರ್ಯಾದುದಾರರಿಂದ ನಾನು ಯಾವುದೇ ಸಾಲ ಪಡೆದುಕೊಂಡಿರುವುದಿಲ್ಲ. ನನಗೆ ಫಿರ್ಯಾದುದಾರರಿಂದ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ. ಫಿರ್ಯಾದುದಾರರು ನನಗೆ ಪರಿಚಯ ಇರುವುದಿಲ್ಲ. ನಾನು ಫಿರ್ಯಾದುದಾರರಿಂದ ಯಾವುದೇ ಹಣ ಪಡೆಯದೇ ಇದ್ದ ಕಾರಣ ನಾನು ಅವರಿಗೆ ಯಾವುದೇ ಹಣವನ್ನು ಮರುಪಾವತಿ ಮಾಡುವ ಭಾದ್ಯತೆಯನ್ನು ಹೊಂದಿರುವುದಿಲ್ಲ. ನಾನು ಫಿರ್ಯಾದುದಾರರಿಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ. ಕಾರಣ ಈ ಪ್ರಕರಣವನ್ನು ವಜಾ ಮಾಡಿ ನನ್ನನ್ನು ಖುಲಾಸೆಗೊಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

**(ಪಾಟಿ ಸವಾಲು ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು)**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಗಿದೆ )
ಓ. ಹೇ, ಕೇ, ಸರಿ ಇದೆ,

ಪ್ರಧಾನ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ